ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೨೮ನೇ ಜನವರಿ ೧೯೮೬ ಮಾಘ ೮, ೧೯೦೭ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಉಪಾಧ್ಯಕ್ಷರು (ಶ್ರೀ ಲಕ್ಷ್ಮೀನರಸಿಂಹಯ್ಯ) ಪೀಠವನ್ನು ಅಲಂಕರಿಸಿದ್ದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ಉತ್ತರ ಕೊಡಲಾಯಿತು

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದಜಾತಿ ಪ್ರಮಾಣ ಪತ್ರಗಳನ್ನು ಕೊಡುವುದು

೧೬೭. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).–– ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜಾತಿ ಪತ್ರಗಳನ್ನು ತಹಶೀಲ್ದಾರರವರು ಕೊಡುವುದನ್ನು ತಪ್ಪಿಸಿ ವಿದ್ಯಾರ್ಥಿ ಪ್ರಾಥಮಿಕ ಶಾಲೆಗೆ ಸೇರುವಾಗ ಕೊಟ್ಟಿರುವ ಜಾತಿ ಆಧಾರದ ಮೇಲೆ ಆಯಾ ಶಾಲೆಯ ಉಪಾಧ್ಯಾಯರು ಕೊಡುವ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಆ) ಈಗಿರುವ ಪದ್ಧತಿಯಿಂದ ಎಲ್ಲಾ ಮಟ್ಟದಲ್ಲೂ ಸುಳ್ಳು ಜಾತಿ ಪತ್ರಗಳ ಪ್ರಕರಣಗಳು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಯವರು).––

ಅ) ಇಲ್ಲ.

ಆ) ಇಲ್ಲ,

ಇ) ಉದ್ಭವಿಸುವುದಿಲ್ಲ,

ಶ್ರೀ ಪಿ. ಸಿ. ಮುನಿಸ್ವಾಮಯ್ಯ –– ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದ ಪ್ರಶ್ನೆ ಹೀಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜಾತಿ ಪತ್ರಗಳನ್ನು ತಹಶೀಲ್ದಾರರವರು ಕೊಡುವುದನ್ನು ತಪ್ಪಿಸಿ ವಿದ್ಯಾರ್ಥಿ ಪ್ರಾಥಮಿಕ ಶಾಲೆಗೆ ಸೇರುವಾಗ ಕೊಟ್ಟಿರುವ ಜಾತಿ ಆಧಾರದ ಮೇಲೆ ಆಯಾ ಶಾಲೆಯ ಉಪಾಧ್ಯಾಯರು ಕೊಡುವ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೆ ? ಎಂದು. ಇದಕ್ಕೆ ಮಾನ್ಯ ಮಂತ್ರಿಗಳು 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ, ವಿದ್ಯಾರ್ಥಿ ಪಾಠಶಾಲೆಗೆ ಸೇರುವಾಗ ಏನು ಜಾತಿಯೆ ಸರ್ಟಿಫಿಕೇಟನ್ನು ಕೊಟ್ಟಿರುತ್ತಾನೆ, ಆ ಜಾತಿಯ ಆಧಾರದ ಮೇಲೆ ಶಾಲೆಯ ಮುಖ್ಯೋಪಾಧ್ಯಾಯರು ಆ ವಿದ್ಯಾರ್ಥಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದ್ದಾನೆಯೇ ಎಂದು ಸರ್ಟಿಫಿಕೇಟ್ ಕೊಡಬಹುದು. ಏಕೆಂದರೆ

ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕುವಾಗ ಪ್ರತಿ ವರ್ಷವೂ ತಹಸೀಲ್ದಾರರಿಂದ ಜಾತಿ ಪ್ರಮಾಣಪತ್ರ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಹೀಗೆ ಜಾತಿಪತ್ರ ತರುವುದಕ್ಕೆ ಗ್ರಾಮಾಂತರ ಪ್ರದೇಶದ ಬಡಜನರಿಗೆ ೪ತಂಬಾ ತೊಂದರೆ ಉಂಟಾಗುತ್ತಿದೆ. ಒಂದು ವೇಳೆ ತಹಸೀಲ್ದಾರರ ಕಚೇರಿಗೆ ಹೋದರೂ ಅಷ್ಟು ಸುಲಭವಾಗಿ ಜಾತಿ ಪತ್ರಗಳು ಸಿಕ್ಕುವುದಿಲ್ಲ. ಇದರಿಂದ ಏನಾಗುತ್ತಿದೆ ಎಂದರೆ. ವಿದ್ಯಾರ್ಥಿ ವರ್ಷಕ್ಕೊಂದು ಸಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕಿಕೊಳ್ಳುವ ಅವಕಾಶವನ್ನು ಕೂಡ ತಪ್ಪಿಸಿದಂತಾಗುತ್ತದೆ. ಆದ್ದರಿಂದ ಈ ಜಾತಿ ಪತ್ರವನ್ನು ತಹಸೀಲ್ದಾರರು ಕೊಡುವುದನ್ನು ತಪ್ಪಿಸಿ ಶಾಲೆಯ ಮುಖ್ಯೋಪಾಧ್ಯಾಯರೇ ಜಾತಿಯ ಬಗ್ಗೆ ಶಿಫಾರಸ್ಸು ಮಾಡಿ ವಿದ್ಯಾರ್ಥಿ ವೇತನ ಕೊಡುವ ಹಾಗೆ ಮಾಡಬೇಕು. ಹಾಗೆಯೇ ನಾನು ಇನ್ನೊಂದು ಪ್ರಶ್ನೆಯನ್ನು ''ಈಗಿರುವ ಪದ್ಧತಿಯಿಂದ ಎಲ್ಲಾ ಮಟ್ಟದಲ್ಲೂ ಸುಳ್ಳು ಜಾತಿ ಪತ್ರಗಳ ಪ್ರಕರಣಗಳು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?'' ಎಂದು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಮಾನ್ಯ ಮಂತ್ರಿಗಳು ''ಉದ್ಭವಿಸುವುದಿಲ್ಲ'' ಎಂದು ಹೇಳಿದ್ದಾರೆ. ನನಗೆ ತಿಳಿದಿರುವಂತೆ ಅನೇಕರು ಅಫಿಡವಿಟ್ ಕೊಟ್ಟು ಮುಂದುವರಿದ ಜನಾಂಗಕ್ಕೆ ಸೇರಿದವರು ಸುಳ್ಳು ಜಾತಿ ಪತ್ರ ತೆಗೆದುಕೊಂಡು ಶಾಲಾಕಾಲೇಜುಗಳಲ್ಲಿ ಮತ್ತು ಈ ೧೮ ಪರ್ಸೆಂಟ್ ಪೋಟಾ ಏನಿದೆ, ಅದರ ಪ್ರಕಾರ ಜಾಗಗಳನ್ನು ಇವರು ಗಿಟ್ಟಿಸಿಕೊಂಡಿದ್ದಾರೆ. ಆದ್ದರಿಂದ ಇವರು ಯಾರು ಜಾತಿಪತ್ರ ಬೇಕೆಂದು ಅರ್ಜಿ ಹಾಕಿದಾಗ, ಸ್ಥಳ ಪರಿಶೀಲನೆ ಮಾಡಿ, ಅಧಿಕಾರಿಗಳು ಸೂಕ್ತ ಪರೀಕ್ಷೆ ಮಾಡಿ ಕೊಟ್ಟರೆ ಈ ಸುಳ್ಳು ಜಾತಿಪತ್ರದ ಸಮಸ್ಯೆಯನ್ನು ನಿವಾರಿಸಿದಂತಾಗುತ್ತದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿ).— ಮಾನ್ಯ ಉಪಾಧ್ಯಕ್ಷರೇ, ಈಗ ಈ ಜಾತಿಪತ್ರಗಳನ್ನು ಕೊಡಲಿಕ್ಕೆ ಕೇಂದ್ರ ಸರ್ಕಾರದ ಒಂದು ಗೈಡ್‌ಲೈನ್ಸ್ ಇದೆ. ಅದರ ಪ್ರಕಾರ ನಾವು ಕೊಡಬೇಕಾಗುತ್ತೆದೆ. ಅದರ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕಲೆಕ್ಟರ್, ಡೆಪ್ಯುಟಿ ಕಮೀಷನರ್, ಅಡಿಷನಲ್ ಡೆಪ್ಯುಟಿ ಕಮೀಷನರ್, ಫಸ್ಟ್‌ಕ್ಲಾಸ್ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟ್, ಸಿವಿಲ್ ಮ್ಯಾಜಿಸ್ಟ್ರೇಟ್, ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್, ತಾಲ್ಲೂಕು ಮ್ಯಾಜಿಸ್ಟ್ರೇಟ್ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಹೀಗೆ ತಹಸೀಲ್ದಾರ್ ರ್ಯಾಂಕ್‌ಗಿಂತ ಕಡಿಮೆ ಇಲ್ಲದವರು ಈ ಜಾತಿಪತ್ರಗಳನ್ನು ಕೊಡಬೇಕೆಂದು ಇದೆ. ಆಮೇಲೆ ಎಷ್ಟೋ ಜನರು ಸುಳ್ಳು ಜಾತಿಪತ್ರಗಳನ್ನು ತೆಗೆದುಕೊಂಡು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಲಕ್ಷಗಟ್ಟಲೆ ಜನರು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಳ್ಳುತ್ತಿದ್ದರೂ ಇದುವರೆಗೂ ಕಂಪ್ಲೇಂಟ್ ಬಂದಿರುವುದು ಕೇವಲ ೮೫ಳಿ ಮಾತ್ರ. ಈ ೮೫ಳಿ ಪ್ರಕರಣಗಳಲ್ಲಿ ಮಾತ್ರ ಫಾಲ್ಸ್ ಸರ್ಟಿಫಿಕೇಟ್‌ಗಳೆಂದು ಗುರುತಿಸಲಾಗಿದೆ. ರಾಜ್ಯ ಸರ್ಕಾರದವರು ಈಗ ಪಿ ಯಂ ಸಿ ಲೆವೆಲ್‌ವರೆಗೆ ಸರ್ಟಿಫಿಕೇಟ್ ಕೊಡುವಲ್ಲಿ ತೊಂದರೆಯಾಗಬಾರದೆಂದು ಇದುವರೆಗೆ ಸುಮಾರು ೧೩ ಸಾವಿರ ಜನರಿಗೆ ಐಡೆಂಟಿಫೈ ಮಾಡಿ ಕಾರ್ಡುಗಳನ್ನು ಕೊಡುತ್ತಿದ್ದೇವೆ. ಸುಮಾರಾಗಿ ಎಲ್ಲರಿಗೂ ಕೂಡ ಕೊಡಬೇಕೆನ್ನುವ ಯೋಜನೆ ಸರ್ಕಾರಕ್ಕಿದೆ. ಇದು ಒಮ್ಮೆ ಇಂಥ ಕಾರ್ಡು ಕೊಟ್ಟರೆ ಐದು ವರ್ಷಗಳ ಕಾಲ ಇದನ್ನು ಉಪಯೋಗಿಸಬಹುದು. ಈಗಾಗಲೇ ಇನ್ನೂ ಹೆಚ್ಚು ಜನರಿಗೆ ಕೊಡಬಹುದಾಗಿತ್ತು ಆದರೆ ಈ ಸರ್ಟಿಫಿಕೇಟ್ ತೆಗೆದುಕೊಳ್ಳುವವರು ಎರಡು ಫೋಟೋಗಳನ್ನು ಕೊಡಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಈ ತರಹ ಕಾರ್ಡುಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಪಿ. ಸಿ. ಮಾಂನಿಸ್ವಾಮಯ್ಯ.— ಈಗಾಗಲೇ ಸುಮಾರು ಜನರು ಸುಳ್ಳು ಜಾತಿ ಪತ್ರ ಕೊಟ್ಟಿರುವುದನ್ನು ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್‌ನವರು ತನಿಖೆ ಮೂಲಕ ಪತ್ತೆ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನಾನು ಓದಿದ್ದೇನೆ. ಆದ್ದರಿಂದ ಈ ಬಗ್ಗೆ ಸರ್ಕಾರ ಏನಾದರು ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಈ ಬಗ್ಗೆ ಕಂಪ್ಲೇಂಟ್ ಬಂದಿದೆ. ಸಿವಿಲ್ ಎನ್‌ಫೋರ್ಸ್‌ಮೆಂಟ್ ಸೆಲ್‌ನವರು ಈ ಬಗ್ಗೆ ತನಿಖೆ ಮಾಡಿದ್ದಾರೆ.

ಶ್ರೀ ಪಿ. ಸಿ. ಮಾಂನಿಸ್ವಾಮಯ್ಯ.— ಈ ವರ್ಷದಿಂದಲಾದರೂ ಈ ಜಾತಿ ಪತ್ರಗಳನ್ನು ತಹಸೀಲ್ದಾರರು ಕೊಡುವುದನ್ನು ತಪ್ಪಿಸಿ ವಿದ್ಯಾರ್ಥಿ ಪ್ರಾಥಮಿಕ ಶಾಲೆಗೆ ಸೇರುವಾಗ ಕೊಟ್ಟರುವ ಜಾತಿ ಆಧಾರದ ಮೇಲೆ ಆಯಾ ಶಾಲೆಯ ಉಪಾಧ್ಯಾಯರು ಜಾತಿ ಪತ್ರಗಳನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಕೇಂದ್ರ ಸರ್ಕಾರದ ಗೈಡ್-ಲೈನ್ಸ್ ಪ್ರಕಾರ ಜಾತಿ ಪತ್ರಗಳನ್ನು ಯಾರಿಂದ ಪಡೆಯಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ, ನಾವು ಅದರ ಪ್ರಕಾರ ನಡೆಯಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಜಾತಿ ಪ್ರಮಾಣ ಪತ್ರಗಳನ್ನು ಮತ್ತೆ ಮತ್ತೆ ಕೇಳುವುದನ್ನು ತಪ್ಪಿಸಿ, ಇದಕ್ಕೆ ಒಂದು ಖಾಯಂ ಆದಂಥ ವ್ಯವಸ್ಥೆಯನ್ನು ಜಾರಿಗೆ ತರುವುದು ಒಳ್ಳೆಯದಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಈಗ ಆದನ್ನು ಜಾರಿಯಲ್ಲಿ ತರುತ್ತಿದ್ದೇವೆ. ೫ ವರ್ಷಗಳಿಗೊಮ್ಮೆ ಜಾತಿ ಪ್ರಮಾಣ ಪತ್ರವನ್ನು ಕೊಡಬೇಕೆಂಬ ಪದ್ಧತಿಯನ್ನು ಜಾರಿಗೆ ತರುತ್ತಿದ್ದೇವೆ. ಇದರಿಂದ ಈ ವರ್ಷ ೧೨ ಸಾವಿರ ಜನರಿಗೆ ಅನುಕೂಲವಾಗಿದೆ. ಇದು ಎಲ್ಲರಿಗೂ ಅನ್ವಯವಾಗುವಂತೆ ಹಂತಹಂತವಾಗಿ ಜಾರಿಗೆ ತರುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಜಾತಿ ಪ್ರಮಾಣ ಪತ್ರಗಳನ್ನು ಪದೇಪದೇ ಕೇಳುವುದರಿಂದ, ವಿದ್ಯಾರ್ಥಿಗಳು ಪದೇಪದೇ ಲಾಯರ್‌ಗಳ ಬಳಿ ಹೋಗಬೇಕಾಗಿದೆ. ಇದನ್ನು ತಪ್ಪಿಸಲು ಮೊದಲನೆಯ ಸಲ ಪಡೆದುಕೊಂಡ ಜಾತಿ ಪ್ರಮಾಣ ಪತ್ರವನ್ನೇ ಖಾಯಂ ರೆಕಾರ್ಡ್ ಎಂದು ಏತಕ್ಕೆ ಪರಿಗಣಿಸಬಾರದು?

ಉಪಾಧ್ಯಕ್ಷರು.—ಈ ಪ್ರಶ್ನೆಗೆ ಉತ್ತರವನ್ನು ಈಗಾಗಲೇ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇಲ್ಲಿಯವರೆಗೆ ಸುಮಾರು ೮೬೧ ಜನ ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ಇದರ ಅನುಕೂಲ ಪಡೆದಿದ್ದಾರೆ. ಕೆಲವರು ಫಾಲ್ಸ್ ಸರ್ಟಿಫಿಕೇಟ್ ಆಧಾರದ ಮೇಲೆ ಕೆಲಸಗಳಿಗೂ ಸೇರಿದ್ದಾರೆಂಬಂದು ತವಂಗೂ ಸಹ ಗೊತ್ತಿದೆ. ಯಾರು ಯಾರು ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ಕೆಲಸಗಳಿಗೆ ಸೇರಿದ್ದಾರೆ, ಅಂ ಹವರನ್ನು ವಿಜಿಲ್ ಎನ್‌ಫೋರ್ಸ್‌ಮೆಂಟ್ ಸೆಲ್‌ನವರು ಕಂಡುಹಿಡಿದು, ಅವರುಗಳ ಮೇಲೆ ಕೇಸ್‌ಗಳನ್ನು ಹಾಕಿದ ಮೇಲೆ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಸರ್ಕಾರಿ ಆಜ್ಞೆಗೆ ಟೈ ಕೊಡಲು ಕಾರಣವೇನು ? ತಪ್ಪು ಮಾಡಿದವರಿಗೆ ಶಿಕ್ಷೆ ಕೊಡದೆ, ಸರ್ಕಾರದವರೇ ಪ್ರೋತ್ಸಾಹ ಕೊಡಲು ಕಾರಣವೇನು ?

ಶ್ರೀ ವಿ. ಎಲ್. ಪಾಟೀಲ್.—ಇಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಲಾಗಿದೆ. ಆದರೆ ಮಾನ್ಯ ಸದಸ್ಯರು ಕೇಳುತ್ತಿರುವುದೇ ಬೇರೆ ಪ್ರಶ್ನೆ ಆಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಫಾಲ್ಸ್ ಸರ್ಟಿಫಿಕೇಟ್ ಕೊಟ್ಟವರ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ವಿ. ಎಲ್. ಪಾಟೀಲ್.—ಇಲ್ಲಿ ವಿದ್ಯಾರ್ಥಿಗಳ ಸಲುವಾಗಿ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಉಪಾಧ್ಯಕ್ಷರು.—ತಾವು ಬೇರೆ ಪ್ರಶ್ನೆ ಕೇಳಿದರೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—"ಈಗಿರುವ ಪದ್ಧತಿಯಿಂದ ಎಲ್ಲಾ ವಂಟ್ಟದಲ್ಲೂ ಸುಳ್ಳು ಜಾತಿ ಪತ್ರಗಳ ಪ್ರಕರಣಗಳು ಜಾಸ್ತಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ" ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿರುವುದರಿಂದ ನಾನು ಈ ಪ್ರಶ್ನೆ ಕೇಳುತ್ತಿದ್ದೇನೆ. ಅನೇಕ ವಿದ್ಯಾರ್ಥಿಗಳು ಫಾಲ್ಸ್ ಸರ್ಟಿಫಿಕೇಟ್ ಕೊಟ್ಟು ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಅಡ್ಮಿಷನ್ ಪಡೆದುಕೊಳ್ಳುತ್ತಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಮೇಲೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಲ್ಲಿಯವರೆಗೂ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಏನು ಕ್ರಮ ಕೈಕೊಳ್ಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.— ಅಂತಹವರ ಮೇಲೆ ಕಾಯಿದೆ ಪ್ರಕಾರ ಕ್ರಮ ಕೈಕೊಳ್ಳಲಾಗುವುದು.

ಶ್ರೀ ಬಿ. ಬಸವಲಿಂಗಪ್ಪ.—ಇವರು ಕಾಯಿದೆ ಪ್ರಕಾರ ಕ್ರಮ ಕೈಕೊಳ್ಳುತ್ತಾರಂತೆ.

ಶ್ರೀ ಮಲ್ಲಿಕಾರ್ಜುನ. ಖರ್ಗೆ.—ಸುಮಾರು ೮೦೦ ಕೇಸ್‌ಗಳಿವೆ. ಫಾಲ್ಸ್ ಸರ್ಟಿಫಿಕೇಟ್ ಕೊಟ್ಟವರ ಮೇಲೆ ಏನು ಕ್ರಮತೆಗೆದುಕೊಂಡಿದ್ದೀರಿ ?

ಶ್ರೀ ವಿ. ಎಲ್. ಪಾಟೀಲ್.--ಕಾಯಿದೆ ಪ್ರಕಾರ ಏನು ಮಾಡಬೇಕು, ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನೋಡುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು.--ತಾವುಗಳು ಒಬ್ಬೊಬ್ಬರಾಗಿ ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು.—ಏನು ಮಾಡುತ್ತಾರೆಂಬುದನ್ನು ಈಗಲೇ ಹೇಳಲಿ. ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಟ್ಟು ಅನುಕೂಲ ಪಡೆದವರಿಂದ ಹಣ ಯಾವ ರೀತಿ ರೆಕವರಿ ಮಾಡುತ್ತಾರೆಂಬುದನ್ನು ಹೇಳಲಿ.

ಶ್ರೀ ವಿ. ಎಲ್. ಪಾಟೀಲ್.—ಕಾಯಿದೆ ಪ್ರಕಾರ ಏನು ಮಾಡಬೇಕೋ, ಅದನ್ನು ಮಾಡುತ್ತೇವೆ,

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಮಂತ್ರಿಗಳು ಈ ರೀತಿ ಉತ್ತರ ಕೊಟ್ಟರೆ ಹೇಗೆ ? ಬೇರೆ ಜಾತಿಯವರು ಈ ಒಂದು ಅನುಕೂಲವನ್ನು ಪಡೆದಿರುವ ಕಾರಣ, ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡದಿದ್ದರೆ ಹೇಗೆ ?

ಉಪಾಧ್ಯಕ್ಷರು.--ಮಾನ್ಯ ಮಂತ್ರಿಗಳು ಹೇಳುತ್ತಿರುವ ಉತ್ತರಕ್ಕೂ ಮತ್ತು ಲಿಖಿತ ಮೂಲಕ ಕೊಟ್ಟಿರುವ ಉತ್ತರಕ್ಕೂ ಸ್ವಲ್ಪ ವ್ಯತ್ಯಾಸವಿದೆ.

ಶ್ರೀ ವಂಟ್ಲಿಕಾರ್ಜುನ ಎಂ. ಖಿರ್ಗೆ.—೮೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಫಾಲ್ಸ್ ಸರ್ಟಿಫಿಕೇಟ್ ಪಡೆದುಕೊಂಡು ಯಾವ ಯಾವ ಕಾಲೇಜ್‌ಗಳಲ್ಲಿ ಅಡ್ಮಿಷನ್ ಪಡೆದುಕೊಂಡಿದ್ದಾರೆ ಎಂತು, ಅಂತಹವರ ಮೇಲೆ ಕಾನೂನು ಪ್ರಕಾರ ಏನೇನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ನಾನು ಕೇಳುತ್ತಿದ್ದೇನೆ. ಇದನ್ನು ಬಿಟ್ಟು ಬೇರೆ ಏನೂ ಕೇಳುತ್ತಿಲ್ಲ ?

ಶ್ರೀ ವಿ. ಎಲ್. ಪಾಟೀಲ್.—ಯಾರು ಯಾರು ಫಾಲ್ಸ್ ಸರ್ಟಿಫಿಕೇಟ್ ಪಡೆದುಕೊಂಡು ಕಾಲೇಜುಗಳಲ್ಲಿ ಪ್ರವೇಶ ದೊರಕಿಸಿಕೊಂಡಿದ್ದಾರೆ ಎಂಬುದರ ಬಗ್ಗೆ ವಿವರಗಳನ್ನು ಮಾನ್ಯ ಸದಸ್ಯರಿಗೆ ನಂತರ ಕೊಡುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಫಾಲ್ಸ್ ಸರ್ಟಿಫಿಕೇಟ್ ಕೊಟ್ಟಂತಹ ಅಧಿಕಾರಿಗಳ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಈಗಲೇ ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಮತ್ತೆ ಪ್ರತ್ಯೇಕವಾದ ಪ್ರಶ್ನೆ ಹಾಕುವ ಅಗತ್ಯ ಏನಿಲ್ಲ. ಈ ಬಗ್ಗೆ ನಮಗೆ ಮಾನ್ಯ ಅಧ್ಯಕ್ಷರು ನೆರವಾಗಬೇಕು.

ಶ್ರೀ ಪಟಮಕ್ಕಿ ರತ್ನಾಕರ್.—ಇಲ್ಲಿ ಪ್ರಶ್ನೆ ಸ್ಪಷ್ಟವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡಲೇಬೇಕು

ಉಪಾಧ್ಯಕ್ಷರು.—ಅವರು ಉತ್ತರ ಕೊಡುತ್ತಾರೆ.

ಶ್ರೀ ವಿ. ಎಲ್. ಪಾಟೀಲ್.—ವಿವರಗಳನ್ನು ಬೇಕಾದರೆ ಕೊಡುತ್ತೇನೆ. ಫಾಲ್ಸ್ ಸರ್ಟಿಫಿಕೇಟ್ ಪಡೆದುಕೊಂಡ ಬಗ್ಗೆ ೮೩ ಕಂಪ್ಲೈಂಟ್ಸ್ ಬಂದಿವೆ. ಇವುಗಳ ಪೈಕಿ ಎಷ್ಟು ಕೇಸ್‌ಗಳು ತನಿಖೆಯಲ್ಲಿವೆ, ಯಾವಯಾವ ವಿದ್ಯಾರ್ಥಿಗಳು ಯಾವಯಾವ ಊರುಗಳಲ್ಲಿ ಮತ್ತು ಯಾವಯಾವ ಕಾಲೇಜುಗಳಲ್ಲಿ ಅಡ್ಮಿಷನ್ ಪಡೆದುಕೊಂಡಿದ್ದಾರೆಂಬ ಬಗ್ಗೆ ವಿವರಗಳನ್ನು ನಂತರ ಬೇಕಾದರೆ ಕೊಡುತ್ತೇನೆ.

ಶ್ರೀ ವಂಟ್ಲಿಕಾರ್ಜುನ ಎಂ. ಖಿರ್ಗೆ.—ಈ ಪ್ರಶ್ನೆಯನ್ನು ಕೇಳಿರುವ ಮಾನ್ಯ ಸದಸ್ಯರು ''ಈಗಿರುವ ಪದ್ಧತಿಯಿಂದ ಎಲ್ಲಾ ವಂಟ್ಟದಲ್ಲೂ ಸುಳ್ಳು ಜಾತಿ ಪತ್ರಗಳ ಪ್ರಕರಣಗಳು ಜಾಸ್ತಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ'' ಎಂದು ಕೇಳಿರುವುದರಿಂದ, ಈ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು ? ಈ ೮೦೦ ಜನರ ಮೇಲೆ ಕಾನೂನು ಪ್ರಕಾರ ಏನೇನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು? ಇಂತಹವರ ಮೇಲೆ ತಾವು ಕ್ರಮ ತೆಗೆದುಕೊಳ್ಳದಿದ್ದರೆ ಈ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಡುವವರಿಗೆ ನೀವೇ ಪ್ರಚೋದನೆ ಮಾಡುತ್ತಿದ್ದೀರೋ ಏನೋ ಎಂದು ನಾವು ಭಾವಿಸಬೇಕಾಗುತ್ತದೆ.

SRI K. H. PATIL.—The Hon. Minister has already agreed that, there are more than 800 cases wherein they have cheated the Government by producing false certificates. He said enquiry has already been completed. Will the Hon. Minister give details on this ?

ಶ್ರೀ ವಿ. ಎಲ್. ಪಾಟೀಲ್.— ಈ ಬಗ್ಗೆ ತಮಗೆ ವಿವರಗಳನ್ನು ಕೊಡುತ್ತೇನೆ. ಇಲ್ಲಿಯವರೆಗೆ ೮೩೪ ಕಂಪ್ಲೈಂಟ್ಸ್ ಬಂದಿವೆ. ಇದರಲ್ಲಿ ತನಿಖೆಗೆ ತೆಗೆದುಕೊಂಡಿರುವುದು ೫೯೬ ಕೇಸ್‌ಗಳು; ೨೦೭ ಕೇಸ್‌ಗಳು ರಿಜಿಸ್ಟರ್ ಆಗಿವೆ. ೩೬೪ ಕೇಸ್‌ಗಳು ಪ್ರೂವ್ ಆಗಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—೩೫೨ ಕೇಸ್‌ಗಳು ತನಿಖೆಯಾಗುತ್ತಿವೆ, ೨೫೨ ಕೇಸ್‌ಗಳು ರಿಜಿಸ್ಟರ್ ಆಗಿವೆ ಎಂದು ಹೇಳಿದ ಮೇಲೆ, ಈ ಫಾಲ್ಸ್ ಸರ್ಟಿಫಿಕೇಟ್ ಕೊಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ಜನರ ಮೇಲೆ ಕ್ರಿಮಿನಲ್ ಕಟ್ಟೆ ಹಾಕಿದ್ದೀರಿ ಮತ್ತು ಎಷ್ಟು ಜನರನ್ನು ಕೆಲಸದಿಂದ ಡಿಬಾರ್ ಮಾಡಿದ್ದೀರಿ ?

ಉಪಾಧ್ಯಕ್ಷರು.—ಮಾನ್ಯ ಪಾಟೀಲರೇ, ಇದನ್ನು ಅರ್ಧ ಗಂಟೆ ಚರ್ಚೆಗೆ ಕಳುಹಿಸಿ. ಅದರಲ್ಲಿ ಚರ್ಚೆ ಮಾಡಿ. ಪ್ರಶ್ನೋತ್ತರದಲ್ಲಿ ಇಷ್ಟೊಂದು ಕಾಲಾವಕಾಶ ತೆಗೆದುಕೊಳ್ಳುವುದು ಬೇಡ.

ಶ್ರೀ ಕೆ. ಹೆಚ್. ಪಾಟೀಲ್ —ಸಮರ್ಪಕವಾದ ಉತ್ತರವನ್ನು, ಈ ಸದನಕ್ಕೆ ಕೊಡಬೇಕು. ಸದನಕ್ಕೆ ಉತ್ತರ ಕೊಡದೇ ಹೋದರೆ ನಾವು ಸಮ್ಮನೆ ಬಿಡಲಿಕ್ಕಾಗುವುದಿಲ್ಲ. ಹಾಗಾದರೆ ನಾವು ಪ್ರಶ್ನೆ ಏತಕ್ಕೆ ಕೇಳಬೇಕು ? ಇದರ ಬಗ್ಗೆ ಮಾನ್ಯ ಸಚಿವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಹೇಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಲಕ್ಷಾಂತರ, ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ ಅದರಲ್ಲಿ ಕಂಪ್ಲೇಂಟ್ ಬಂದಿರುವುದು ೮೩೪. ಇದರಲ್ಲಿ ಎಷ್ಟೋ ಕೇಸುಸ್ ಪ್ರೂವ್ ಆಗಿಲ್ಲ. ಪ್ರೂವ್ ಆದರೆ, ಅವರನ್ನು ರಿಪೇರಿ ಮಾಡುತ್ತೇವೆಯೇ ಹೊರತು ವಿದ್ಯಾರ್ಥಿಗಳಿಗೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.— ಫಾಲ್ಸ್ ಸರ್ಟಿಫಿಕೇಟ್ ಕೊಟ್ಟವರ ಕಡೆಯಿಂದ ರಿಕವರಿ ಮಾಡುತ್ತೀರಾ ?

ಒಬ್ಬ ಮಾನ್ಯ ಸದಸ್ಯರು.—ಫಾಲ್ಸ್ ಸರ್ಟಿಫಿಕೇಟ್ ಕೊಟ್ಟವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಹುಡುಗರು ಫಾಲ್ಸ್ ಸರ್ಟಿಫಿಕೇಟ್ ಪ್ರಡ್ಯೂಸ್ ಮಾಡುತ್ತಾರೆ. ಅಂತಹವರ ಕಡೆಯಿಂದ ರಿಕವರಿ ಮಾಡುತ್ತೇವೆಂದು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು, ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ದೇವೇಗೌಡರು ಏನೋ ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಅವರ ತರಹ ಉಸಿರು ಬಿಡುವುದಕ್ಕೆ ನಮಗೆ ಆಗುವುದಿಲ್ಲ., ಫಾಲ್ಸ್ ಸರ್ಟಿಫಿಕೇಟ್ ಕೊಟ್ಟವರ ಬಗ್ಗೆ ತನಿಖೆ ನಡೆದು, ತಕರಾರು ದೂರುಗಳಲ್ಲಿ ಕೆಲವು ಧೃಡವಾಗಿದೆ. ಕೆಲವು ದೃಡವಾಗಿಲ್ಲ ಆದಕ್ಕೆ ಸಂಬಂಧಪಟ್ಟ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಯಾವುದರಲ್ಲಿ ತಕರಾರು ಸಾಬೀತಾಗಿದೆ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಉತ್ತರ ಹೇಳಿದ್ದಾರೆ. ರಿಕವರಿ ಎಂದು ಹೇಳಿದಾಗ, ಇದರ ಬಗ್ಗೆ ತಪ್ಪು ಅಭಿಪ್ರಾಯ ಬೇಕಾಗಿಲ್ಲ. ಏನಾ ಬೆನಿಫಿಟ್ಸ್ ಕೊಡುತ್ತೇವೆ, ಅದಕ್ಕೆ ಸಂಬಂಧಪಟ್ಟ ಹಣವನ್ನು ಸರ್ಕಾರ ಏನು ವೆಚ್ಚ ಮಾಡಿದೆ, ಅದನ್ನು ರಿಕವರಿ ಮಾಡುತ್ತೇವೆಂದು ಹೇಳಿದ್ದಾರೆ. ಫೀ ಕೊಟ್ಟಿದ್ದನ್ನೂ ರಿಕವರಿ ಮಾಡುತ್ತೇವೆ. ಇದಕ್ಕಿಂತ ಅಪರನ್ನು ಪ್ರಾಸಿಕ್ಯೂಟ್ ಮಾಡಬೇಕು, ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂಬ ಬಗ್ಗೆ, ಅವರು ಈಗಾಗಲೇ ಹೇಳಿದ್ದಾರೆ. ಆದರೆ ಈಗಿರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಏನೇನು ಕ್ರಮ ತೆಗೆದುಕೊಳ್ಳ

ಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಲ್ಲೆ. ಆಮೇಲೆ ಫಾಲ್ಸ್ ಸರ್ಟಿಫಿಕೇಟ್ ಬಗ್ಗೆ ಸರ್ಕಾರ ಪ್ರಚೋದನೆ ಮಾಡುತ್ತದೆಂದು ಹೇಳಿದರು ಇದು ಜನತಾ ಸರ್ಕಾರದಲ್ಲೇನೂ ನಡೆದು ಬಂದಿಲ್ಲ, ಎಲ್ಲಾ ಸರ್ಕಾರದಲ್ಲೂ ಕೂಡ ಬಂದಿದೆ. ಇದರ ಬಗ್ಗೆ ಚರ್ಚೆ ಮಾಡೋಣ. ಸ್ವಾಮಿ ಇಷ್ಟು ಭರವಸೆ ಕೊಡಬಲ್ಲೆ. ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅಂತಹವರ ಮೇಲೆ ಈಗಿರುವ ಕಾನೂನು ಚೌಕಟ್ಟಿನಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ದಯಮಾಡಿ ನನಗೆ ಅವಕಾಶ ಕೊಡಬೇಕು...

ಶ್ರೀ ಬಿ. ಬಸವಲಿಂಗಪ್ಪ.—ಇದು ಸಾಮಾನ್ಯವಾದ ಪ್ರಶ್ನೆ ಅಲ್ಲ.....

ಉಪಾಧ್ಯಕ್ಷರು,—ಇದನ್ನು ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ...

ಒಬ್ಬ ಮಾನ್ಯ ಸದಸ್ಯರು.—ಅಂತರ್‌ಜಾತೀಯ ವಿವಾಹಗಳು ಬೇಕಾದಷ್ಟು ಆಗುತ್ತಿವೆ. ಇದರ ಬಗ್ಗೆ ಹೆಣ್ಣಿನ ಜಾತಿಗೆ ಸರ್ಟಿಫಿಕೇಟ್ ಕೊಡುತ್ತೀರೋ. ಗಂಡಿನ ಜಾತಿಗೆ ಸರ್ಟಿಫಿಕೇಟ್ ಕೊಡುತ್ತೀರೋ?.....

(ಗೊಂದಲ)

ಉಪಾಧ್ಯಕ್ಷರು.—ಈ ಪ್ರಶ್ನೆ ಇಲ್ಲಿಗೆ ಮುಗಿದಿದೆ. ಲಿಖಿತೇ ಕ್ರಮಸಂಖ್ಯೆಯ ಪ್ರಶ್ನೆಯನ್ನು ಮುಂದೂಡಿದೆ. ಈಗ ಲಿಖಿತೇ ಪ್ರಶ್ನೆ. (ಪ್ರಶ್ನೆ ೩೨೧)

ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ

೩೨೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೫೦ನೇ ಸಂವಿಧಾನ (ಪರಿಶಿಷ್ಟ ವರ್ಗ) ಆದೇಶವಂತೆ ರಾಜ್ಯದ ಪರಿಶಿಷ್ಟ ವರ್ಗದ ಜನಸಂಖ್ಯೆ ಹಾಗೂ ೧೯೬೧, ೧೯೭೧ ಮತ್ತು ೧೯೮೧ನೇ ಜನಗಣತಿ ಪ್ರಕಾರ ಪರಿಶಿಷ್ಟ ವರ್ಗದ ಜನಸಂಖ್ಯೆ

ಆ) ೧೯೬೧ ಮತ್ತು ೧೯೭೧ನೇ ಜನಗಣತಿ ಪ್ರಕಾರ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಪರಿಶಿಷ್ಟ ವರ್ಗದ ಜನರು ನೆಲೆಸಿರುತ್ತಾರೆ ಮತ್ತು ೧೯೮೧ನೇ ಜನಗಣತಿ ಪ್ರಕಾರ ಎಲ್ಲೆಲ್ಲಿ ನೆಲೆಸಿರುತ್ತಾರೆ

ಇ) ೧೯೬೧ ಮತ್ತು ೧೯೭೧ನೇ ಜನಗಣತಿ ಜನಸಂಖ್ಯೆಗೂ ಮತ್ತು ೧೯೮೧ನೇ ಜನಗಣತಿ ಜನಸಂಖ್ಯೆಗೂ ಹೋಲಿಸಿದರೆ ರಾಜ್ಯದ ಪರಿಶಿಷ್ಟ ವರ್ಗ ಜನಸಂಖ್ಯೆ ಹೆಚ್ಚಾಗಿದೆಯೇ ? ಹಾಗಿದ್ದಲ್ಲಿ ಕಾರಣಗಳೇನು ?

ಈ) ಪರಿಶಿಷ್ಟ ವರ್ಗಗಳಿಗೆ ದೊರೆಯುವ ಸೌಲಭ್ಯಗಳನ್ನು ಪಡೆಯುವ ದೃಷ್ಟಿಯಿಂದ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಜಾತಿಗಳವರು ೧೯೮೧ರ ಜನಗಣತಿಯಲ್ಲಿ ತಾವು ಪರಿಶಿಷ್ಟ ವರ್ಗದವರೆಂದು ನಮೂದಿಸಲು ಪ್ರಯತ್ನಿಸಿರುವರೆ ?

ಉ) ಸರ್ಕಾರವು ಈ ಜಾತಿಗಳ ತಪ್ಪು ಪ್ರಯತ್ನದ ಬಗ್ಗೆ ಗಮನ ಕೊಡಬಾರದೆಂದು ಉದ್ದೇಶಿಸಿರುವರೇ ?